ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ತೋರಿದ ತಂಡಗಳಿಗೆ ನೀಡುವ ಬಹುಮಾನದ ಮೊತ್ತ ಹೆಚ್ಚು ಆಕರ್ಷಕವಾಗುತ್ತಿದೆ. ಒಟ್ಟು ₹6 ಕೋಟಿ ಬಹುಮಾನದಲ್ಲಿ ಚಾಂಪಿಯನ್ ತಂಡಕ್ಕೆ ₹3 ಕೋಟಿ, ರನ್ನರ್ಸ್ ಅಪ್ ಆದವರಿಗೆ ₹ 1.8 ಕೋಟಿ, ಮೂರನೇ ಸ್ಥಾನ ಗಳಿಸಿದವರಿಗೆ ₹1.2 ಕೋಟಿ ಕೊಡಲಾಗುತ್ತಿದೆ. ಸೆಮಿಫೈನಲ್ ಹಂತದಲ್ಲಿ ಸೋತ ಎರಡು ತಂಡಗಳಿಗೆ ತಲಾ ₹90 ಲಕ್ಷ, ಆರು ಮತ್ತು ಏಳನೇ ಸ್ಥಾನ ಗಳಿಸಿದ ತಂಡಗಳಿಗೆ ತಲಾ ₹45 ಲಕ್ಷ ಬಹುಮಾನ ನಿಗದಿ ಮಾಡಲಾಗಿದೆ.

## ಗ್ರಾಮೀಣ ಆಟಗಾರರಿಗೆ ಶುಕ್ರದೆಸೆ

‘ಪಟ್ನಾ ಪೈರೇಟ್ಸ್’ ತಂಡದ ಸ್ಟಾರ್ ಆಟಗಾರ ಸುಕೇಶ್ ಹೆಗ್ಡೆ ಉಡುಪಿಯ ಕಾರ್ಕಳದ ಕಡ್ತಲ ಗ್ರಾಮದ ಪ್ರತಿಭೆ. ಶಾಲಾ ದಿನಗಳಿಂದಲೇ ಕಬಡ್ಡಿ ಆಡುತ್ತಿದ್ದ ಸುಕೇಶ್, ಆಳ್ವಾಸ್‌ನಲ್ಲಿ ಕಾಲೇಜು ಸೇರಿದ ಬಳಿಕ ಈ ಕ್ರೀಡೆಯನ್ನು ವೃತ್ತಿಪರವಾಗಿ ಸ್ವೀಕರಿಸಿದರು. 2012ರಲ್ಲಿ ಸ್ಪರ್ಧಾತ್ಮಕ ಸವಾಲುಗಳನ್ನು ಎದುರಿಸಿ, ಮರುವರ್ಷವೇ ರಾಜ್ಯ ತಂಡದಲ್ಲಿ ಸ್ಥಾನ ಗಳಿಸಿದರು. ಈಗಲೂ ಅವರು ಕರ್ನಾಟಕ ತಂಡದ ಆಟಗಾರ.

ಪ್ರೊ ಕಬಡ್ಡಿ ಟೂರ್ನಿಯ ಮೊದಲ ಆವೃತ್ತಿಯಿಂದಲೂ ಸುಕೇಶ್ ಆಡುತ್ತಿದ್ದಾರೆ. ಆರಂಭದಲ್ಲಿ ‘ತೆಲುಗು ಟೈಟನ್ಸ್’ ತಂಡದಲ್ಲಿ ಆಡಿ ಅದೇ ತಂಡಕ್ಕೆ ನಾಯಕರೂ ಆಗಿದ್ದರು. ಬಳಿಕ ‘ಗುಜರಾತ್ ಫಾರ್ಚ್ಯೂನ್ ಜೈಂಟ್ಸ್’, ‘ತಮಿಳು ತಲೈವಾಸ್’ ಮತ್ತು ‘ಬಂಗಾಳ ವಾರಿಯರ್ಸ್’ ತಂಡಗಳಲ್ಲಿ ಆಡಿದ್ದರು. ಇದೇ ಟೂರ್ನಿಯಲ್ಲಿ 100ಕ್ಕೂ ಹೆಚ್ಚು ಪಂದ್ಯಗಳನ್ನು ಆಡಿರುವ ಹೆಗ್ಗಳಿಕೆ ಹೊಂದಿದ್ದಾರೆ.

ಮಂಡ್ಯ ಜಿಲ್ಲೆಯ ಸಾತನೂರಿನ ಎಸ್. ವಿಶ್ವಾಸ್ ಗ್ರಾಮೀಣ ಪ್ರದೇಶದ ಮತ್ತೊಬ್ಬ ಪ್ರತಿಭಾವಂತ ಕಬಡ್ಡಿ ಆಟಗಾರ. ಶಾಲಾ ಹಂತದಿಂದಲೇ ಈ ಕ್ರೀಡೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡವರು. ಆಗಾಗ ಶಾಲಾ–ಕಾಲೇಜು ಮಟ್ಟದ ಟೂರ್ನಿಗಳಲ್ಲಿ ಆಡುತ್ತಿದ್ದರು. ರಾಜ್ಯಮಟ್ಟದ ಟೂರ್ನಿಯಲ್ಲಿ ಆಡಿದ್ದಾರೆ. ಒಂದು ಸಲ ರಾಷ್ಟ್ರೀಯ ಕಬಡ್ಡಿ ಟೂರ್ನಿಯಲ್ಲಿ ಆಡಲು ಅವಕಾಶ ಸಿಕ್ಕಿದೆ.

ಇಷ್ಟೆಲ್ಲಾ ಆದರೂ ವಿಶ್ವಾಸ್ ಉತ್ತಮವಾಗಿ ಕಬಡ್ಡಿ ಆಡಬಲ್ಲ, ಊರಿನ ಕೀರ್ತಿ ಬೆಳಗಬಲ್ಲ ಎನ್ನುವುದು ಕುಟುಂಬಸ್ಥರಿಗೆ ಹಾಗೂ ಸ್ನೇಹಿತರಿಗೆ ಮಾತ್ರ ಗೊತ್ತಿತ್ತು. ಶಾಲಾ ಕಾಲೇಜುಗಳಲ್ಲಿ ಮಾತ್ರ ಅವರ ಪ್ರತಿಭೆ ಸದ್ದು ಮಾಡುತ್ತಿತ್ತು. ಒಂದು ವರ್ಷದ ಹಿಂದೆ ‘ಪ್ರೊ ಕಬಡ್ಡಿ’ ಟೂರ್ನಿಯಲ್ಲಿ ‘ಪಟ್ನಾ ಪೈರೇಟ್ಸ್’ ತಂಡದಲ್ಲಿ ಸ್ಥಾನ ಗಳಿಸುತ್ತಿದ್ದಂತೆ ಕಬಡ್ಡಿಯನ್ನು ಅಪಾರವಾಗಿ ಪ್ರೀತಿಸುವ ಮತ್ತು ಆಡುವ ಮಂಡ್ಯ ಜನರ ಕಣ್ಮಣಿಯಾದ. ಟಿ.ವಿ.ಯಲ್ಲಿ ಕಾಣಿಸಿಕೊಳ್ಳುವುದು ಗೊತ್ತಾದಾಗ ಊರಿಗೇ ಊರೇ ಮೆಚ್ಚಿಕೊಂಡಿತು. ರೈಡರ್ ವಿಭಾಗ ನಿರ್ವಹಿಸುವ ವಿಶ್ವಾಸ್ ರಾಷ್ಟ್ರೀಯ ಮಟ್ಟದ ಟೂರ್ನಿಯಲ್ಲಿ ಆಡಿದಾಗ ಯಾರೂ ಗುರುತಿಸಿರಲಿಲ್ಲ ಎನ್ನುವುದನ್ನೂ ಗಮನಿಸಬೇಕು.



ಪ್ರೊ ಕಬಡ್ಡಿ ಟೂರ್ನಿಯಲ್ಲಿ ಆಟಗಾರರು ಕಾಣಿಸಿಕೊಳ್ಳುವ ರೀತಿಯಲ್ಲಿ ನಾನೂ ಅಲ್ಲಿ ಸ್ಥಾನ ಗಳಿಸಬೇಕು ಎನ್ನುವ ಕಾರಣಕ್ಕೆ, ಮೂರ್ನಾಲ್ಕು ವರ್ಷಗಳ ಹಿಂದೆಯಷ್ಟೇ ವಿಶ್ವಾಸ್ ಈ ಕ್ರೀಡೆಯನ್ನು ಗಂಭೀರವಾಗಿ ಸ್ವೀಕರಿಸಿದರು. ವೃತ್ತಿಪರ ಆಟಗಾರರಾಗಿ ಬದಲಾದರು.

‘ರಾಷ್ಟ್ರೀಯ ಟೂರ್ನಿಯಲ್ಲಿ ಆಡಿ ಊರಿಗೆ ಹೋದಾಗ ಯಾರೂ ಕೇಳುತ್ತಲೂ ಇರಲಿಲ್ಲ. ಪ್ರೊ ಕಬಡ್ಡಿಯಲ್ಲಿ ಸ್ಥಾನ ಸಿಕ್ಕ ವಿಷಯ ಗೊತ್ತಾಗುತ್ತಿದ್ದಂತೆ ಎಲ್ಲರೂ ಗುರುತಿಸತೊಡಗಿದರು. ಇಲ್ಲಿ ಸಿಗುವ ಗೌರವ, ಸೌಲಭ್ಯ ಮತ್ತು ಕಲಿಯಲು ಇರುವ ಅವಕಾಶಗಳು ಬಹಳಷ್ಟು ದೊಡ್ಡವು. ಹೆಚ್ಚು ಪಂದ್ಯಗಳಲ್ಲಿ ಆಡಬೇಕು ಎನ್ನುವ ಗುರಿಯಿದೆ’



## ಮನೆ ಬಾಗಿಲಿಗೆ ಬರುತ್ತಿವೆ ಅವಕಾಶ

ಪ್ರೊ ಕಬಡ್ಡಿ ಆರಂಭವಾದ ಬಳಿಕ ತಂಡಗಳ ಮಾಲೀಕರೇ ಆಟಗಾರರನ್ನು ಹುಡುಕಿಕೊಂಡು ಮನೆ ಬಾಗಿಲಿಗೆ ಬರುತ್ತಿದ್ದಾರೆ. ಆದರೆ, ಫ್ರಾಂಚೈಸ್‌ಗಳ ನಿರೀಕ್ಷೆಗೆ ತಕ್ಕಷ್ಟು ಗುಣಮಟ್ಟದ ಹೊಸ ಆಟಗಾರರು ಸಿಗುತ್ತಿಲ್ಲ. ಇದಕ್ಕಾಗಿ ಹಲವು ಫ್ರಾಂಚೈಸ್‌ಗಳು ಪ್ರತಿಭಾ ಶೋಧ ನಡೆಸುತ್ತಿವೆ.

ದೇಶದ ಬೇರೆ ಭಾಗದ ಪರಿಸ್ಥಿತಿಗೆ ಹೋಲಿಸಿದರೆ ಉತ್ತರ ಪ್ರದೇಶ, ಹರಿಯಾಣ, ದೆಹಲಿ, ದಕ್ಷಿಣ ಭಾರತದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಮಾತ್ರ ಗ್ರಾಮೀಣ ಮಟ್ಟದಿಂದ ಆಟಗಾರರು ಬರುತ್ತಿದ್ದಾರೆ. ಆಟಗಾರರ ಮನೋಭಾವ, ಸಾಮರ್ಥ್ಯ, ಕ್ಲಬ್‌ಗಳಲ್ಲಿ ತೋರುವ ಸಾಮರ್ಥ್ಯ ಪ್ರೊ ಕಬಡ್ಡಿಯಲ್ಲಿ ಅವಕಾಶ ಸಿಗುವುದಕ್ಕೆ ಪೂರಕವಾಗುತ್ತವೆ. ಕೆಲ ಭಾಗಗಳಲ್ಲಿ ಮಾತ್ರ ಆಟಗಾರರು ಕಬಡ್ಡಿಯ ಬಗ್ಗೆ ಆಸಕ್ತಿ ತೋರಿದರೆ ಸಾಲದು. ದೇಶದಾದ್ಯಂತ ಪ್ರತಿಭಾನ್ವಿತ ಆಟಗಾರರು ರೂಪುಗೊಂಡರೆ, ಭವಿಷ್ಯದಲ್ಲಿಯೂ ಕಬಡ್ಡಿ ಲೀಗ್‌ನ ಜೋಶ್ ಮುಂದುವರಿಯುತ್ತದೆ.

–ಜೀವಾ ಕುಮಾರ್,
ಅಂತರರಾಷ್ಟ್ರೀಯ ಕಬಡ್ಡಿ ಆಟಗಾರ